ಹೇಳುತ್ತಿದ್ದರು, 'ಗೌರಿ ಹಬ್ಬ ಕಳೆಯೋವರೆಗೆ ಇರಲಿ ಮೈಮೇಲೆ. ಬಿಚ್ಚೋಲೆ ಗೌರಮ್ಮನ ಥರ ಯಾಕಿರ್ಬೇಕು?' ತನಗೆ ಯಾವುದಾದರೂ ಕೆಲಸ ಬರುವುದಿಲ್ಲ ಎಂದು ಹೇಳುವುದಕ್ಕೆ ಕನಕ ನಿಗೆ ಕೀಳರಿಮೆಯಾಗುತ್ತಿರಲಿಲ್ಲ. 'ಕೊಟ್ಟಿಗೆಗೆ ಕಾಲಿಟ್ಟು ನಂಗೆ ಅಭ್ಯಾಸವಿಲ್ಲ' ಎಂದು ನೇರವಾಗಿ ಹೇಳಿದ್ದಳು ಕನಕ. ಅವಳಿಗೆ ಇಷ್ಟವಿಲ್ಲದ ಕೆಲಸಕ್ಕೆ 'ಬರುವುದಿಲ್ಲ' ಎನ್ನುವುದೊಂದು ನೆಪ. ಬರದಿದ್ದರೆ ಕಲಿಯುವ ಹುಮ್ಮಸ್ಸಾದರೂ ಬೇಡವಾ? ಎಂದು ಸೀತಾಲಕ್ಷ್ಮಿಗೆ ಅನುಮಾನ ಕಾಡಿದ್ದಿತ್ತು. 'ತನಗಾಗಿದ್ದರೆ ಅತ್ತೆ ಸುಮ್ಮನೆ ಬಿಡುತ್ತಿರಲಿಲ್ಲ. ದೊಡ್ಡವರ ಮನೆ ಹುಡುಗಿ ಎಂದು ಎದುರು ಹಾಕಿಕೊಳ್ಳಲು ಹಿಂದೆಗೆಯುತ್ತಾರೆ' ಎಂದು ಅವಳು ಅಂದುಕೊಂಡಿದ್ದಿತ್ತು, ನುಂಗಿಕೊಂಡಿದ್ದೂ ಇತ್ತು.

ಕೊಟ್ಟಿಗೆಗೆ ಹೋಗಿ ವೆಂಕಮ್ಮ ಹಾಲು ಕರೆದುಕೊಂಡು ಬಂದರು. ಸೋಸಿದ ಹಾಲನ್ನು ಇದ್ದಿಲೊಲೆಯ ಮೇಲೆ ಕಾಯಿಸಲು ಇಟ್ಟಾಯ್ತು. ಅವತ್ತು ಬೆಳಗಿನ ತಿಂಡಿ ಸುಲಭದ್ದು. ಒಗ್ಗರಣೆ ಅವಲಕ್ಕಿ. ಅವಲಕ್ಕಿ ಅಂದರೆ ಆ ಕಾಲದ್ದು. ಮನೆಯಲ್ಲೇ ಭತ್ತ ಬೇಯಿಸಿ ಕುಟ್ಟಿದ ಅವಲಕ್ಕಿ. ಅವಲಕ್ಕಿ ಭತ್ತ ಕುಟ್ಟಿಕೊಡುವುದಕ್ಕೆ ಒಬ್ಬ ಬ್ರಾಹ್ಮಣ ಬರುತ್ತಿದ್ದರು. ಬೇರೆ ಎಲ್ಲೂ ಕೆಲಸ ಇಲ್ಲದಿದ್ದರೆ ಇವರ ಮನೆಗೆ ಹಾಜರು.

'ಹಂಗಿದ್ರೆ ಭತ್ತ ಬೇಯ್ಸೋದಾ ಭಟ್ರೇ?' ಎನ್ನುತ್ತಾ ವಿಶೇಷ ಕಟ್ಟೆಗೆಂದು ಹಿತ್ತಲ ಜಗುಲಿಯಲ್ಲಿ ಸಾಲಾಗಿ ಹಾಕಿಟ್ಟಿದ್ದ ಒಲೆಯೊಂದರ ಮೇಲೆ ದೊಡ್ಡ ಹಂಡೆಯಲ್ಲಿ ಬೇಯುತ್ತಿತ್ತು ಭತ್ತ. ಭಟ್ಟರ ಮೇಲ್ವಿಚಾರಣೆ. ಭತ್ತ ಬೇಯಿಸುವುದು ಒಂದು ಹದ. ಬೆಂದ ಭತ್ತವನ್ನು ಸಣ್ಣ ಉರಿಯಲ್ಲಿ ಹುರಿಯುವುದು ಮತ್ತೊಂದು ಹದ. ಅದು ಯಾವತ್ತೂ ಕಮಲನ ಕೆಲಸ. ಮನೆ ಅವಲಕ್ಕಿ ಅಚ್ಚೇರು ನೆನೆಸಿದರೆ ಒಂದಕ್ಕೆ ನಾಲ್ಕರಷ್ಟು ಒದಗುತ್ತಿತ್ತು. ಒಪ್ಪತ್ತೂಟ ಮಾಡುವ ವೆಂಕಮ್ಮನಿಗೆ ರಾತ್ರಿ ಒಂದು ಮುಷ್ಠಿ ಅವಲಕ್ಕಿ ನೆನೆಸಿ ಅದಕ್ಕೆ ಬೆಲ್ಲ, ಮಜ್ಜಿಗೆಯೋ, ಒಂದು ಒಗ್ಗರಣೆಯೋ ಹಾಕಿಕೊಂಡರೆ ಅದೇ ಅವರ ಮೃಷ್ಟಾನ್ನ. ಸೀತಾಲಕ್ಷ್ಮಿ ಬೆಳಗಿನ ತಿಂಡಿಗೆ ಅವಲಕ್ಕಿ ತೊಳೆದು ನೆನೆಸಿಟ್ಟು ಕಾಯಿ ತುರಿಯಲು ಕೂತಿದ್ದಳು. ಹಾಲು ಉಕ್ಕಿ ಬರುವವರೆಗೆ ಒಲೆಬುಡದಲ್ಲಿ ಕೂತು ಬಿಸಿ ಬಿಸಿ ಹಾಲು ಹಾಕಿಕೊಂಡು ಎರಡನೇ ಸಲದ ಕಾಫಿ ಕುಡಿಯುತ್ತಾರೆ ವೆಂಕಮ್ಮ. ಕಾಫಿ ಬಗ್ಗಿಸಿಕೊಂಡು ಕುಡಿಯುವಾಗ ಹೀಗೇ ಮಾತಿಗೆ ಕೇಳಿದರು,

'ಅವಳು ಕಾಫಿ ಕುಡ್ಕಂಡು ಹೋದ್ಲೇನೆ?'

'ಇಲ್ಲಪ್ಪಾ, ಅತ್ತಿಗೆ ಎದ್ದು ಬಂದಿದ್ದು ಕಾಣ್ಲಿಲ್ಲ ನಂಗೆ...' ಅನ್ನುವಾಗ ಸೀತಾಲಕ್ಷ್ಮಿಗೆ ಹಿಂದಿನ ದಿನದ ಅತ್ತಿಗೆಯ ವರ್ತನೆ ನೆನಪಾಯ್ತು. ಮನಸ್ಸು ಮೃದುವಾಯ್ತು.

'ಇಷ್ಟೊತ್ತು ಯಾವತ್ತೂ ಮಲಗಿದೋಳಲ್ಲ...' ಎಂದು ಲೋಟಕ್ಕೆ ಬಗ್ಗಿಸಿದ ಕಾಫಿಯನ್ನು ಅಲ್ಲೇ ಇಟ್ಟು ಆತಂಕದಿಂದ ಮಗಳ ಕೋಣೆಗೆ ಹೋದರು ವೆಂಕಮ್ಮ.

'ಅಯ್ಯೋ, ನೊಣಗಿಣ ಬಿದ್ರೆ ಲೋಟ ಭರ್ತಿ ಇರೋ ಕಾಫಿ ದಂಡ. ಕಲಗಚ್ಚಿನ ಬಾನಿಗೆ ಸುರೀತಾರೆ' ಅಂದುಕೊಳ್ಳುತ್ತಾ ಕಾಯಿ ತುರಿಯುವುದನ್ನು ಅರ್ಧಕ್ಕೆ ನಿಲ್ಲಿಸಿ, ಕಾಫಿ ಲೋಟದ ಮೇಲೆ ಮತ್ತೊಂದು ಲೋಟ ಕವುಚಿಟ್ಟು ತನ್ನ ಕೆಲಸಕ್ಕೆ ಮರಳಿದಳು ಸೀತಾಲಕ್ಷ್ಮಿ. ಸ್ವಲ್ಪ ಹೊತ್ತಿಗೆ ಧಡಬಡ ಒಳಗೆ ಬಂದರು ವೆಂಕಮ್ಮ.

'ಕೋಣೇಲಿ ಅವಳು ಇಲ್ಲ ಕಣೇ. ಕಾಫೀನೂ ಕುಡೀದೇ ಎಲ್ಲಿಗೆ ಎದ್ಲು?'

'ಬಚ್ಚಲಲ್ಲಿ ನೋಡಿದ್ರಾ?'

'ಅಲ್ಲಿ ಕನಕ ಬಾಗಿಲು ಹಾಕ್ಕಂಡಿದಾಳೆ. ಬಾಗಿಲು ತಟ್ಟಿದ್ರೆ 'ನಾನಿದೀನಿ ಅತ್ತೆ' ಅಂದ್ಲು..'

'ಮುಟ್ಟು ಗಿಟ್ಟು ಆಗಿರ್ಬೋದು ಅತ್ತೆ. ಆ ಕೋಣೇಲಿ ನೋಡಿದ್ರಾ?'

'ಅಯ್ಯೋ, ಹೋದ ಹುಣ್ಣಿಮೆಲಿ ಅವಳು ಹೊರಗೆ ಕೂತಿದ್ದಲ್ಲನೇ? ಇನ್ನೂ ಹದಿನೈದು ದಿನ ಸೈತಾ ಆಗಿಲ್ಲ.'

ಮೆಟ್ಟುಗತ್ತಿ ಬದಿಗೆ ಒರಗಿಸಿಟ್ಟು ಸೊಂಟದ ಮೇಲೆ ಕೈಯಿಟ್ಟುಕೊಂಡು ಮೇಲಕ್ಕೆದ್ದಳು ಬಸುರಿ. ಅವಳಿಗೂ ಆತಂಕ ಶುರುವಾಗಿತ್ತು. ಕಮಲನ ಕೋಣೆಗೆ ಹೋಗಿ ನೋಡಿದರೆ ಹಾಸಿದ ಲೇಪು ಹಾಗೇ ಉಂಟು. ಮೇಲ್ಹಾಸಿನ ವೆಂಕಮ್ಮನ ಹಳೇ ಸೀರೆ ಚೂರೂ ಮುದುಡದೆ ತನ್ನನ್ನು ಯಾರೂ ಉಪಯೋಗಿಸಿಲ್ಲ ಎಂದು ಸಾರಿ ಹೇಳಿತು. ಕಾಲ ಬಳಿ ಮಡಿಚಿಟ್ಟ ಕಂಬಳಿಯೂ ಅಲ್ಲೇ, ಹಾಗೇ. ಎಲ್ಲಿಗಾದರೂ ಎದ್ದು ಹೋಗಿದ್ದರೆ ಹಾಸಿಗೆ ಮಡಿಸಿಡದೆ ಹೋಗುತ್ತಿರಲಿಲ್ಲ ಅತ್ತಿಗೆ. ಎದ್ದ ಕೂಡಲೆ ಮೊದಲು ಮಾಡುತ್ತಿದ್ದಿದ್ದೇ ಆ ಕೆಲಸ.

'ಮಾರಾಯ್ತೀ, ನಂಗ್ಯಾಕೋ ಕೈಕಾಲು ನಡುಗ್ತಿದೆ...' ಎನ್ನುತ್ತಾ ಮಗಳ ಹಾಸಿಗೆಯ ಮೇಲೆ ಕುಸಿದು ಕೂತರು ವೆಂಕಮ್ಮ.

'ಸುಮ್ನಿರಿ ಅತ್ತೆ. ಎಲ್ಹೋಗ್ತಾರೆ ಅತ್ತಿಗೆ? ಇಲ್ಲೇ ಎಲ್ಲೋ ಹೋಗಿರ್ತಾರೆ.'

'ರಾತ್ರಿ ಮಲಗಿದ ಹಂಗೆ ಕಾಣ್ತಿಲ್ವಲ್ಲೇ...'

ಇದಕ್ಕೆ ಸೀತಾಲಕ್ಷ್ಮಿಯ ಬಳಿ ಉತ್ತರವಿರಲಿಲ್ಲ. ಅವಳು ಎದ್ದು ಹೋಗಿ ಮುಂಚೀಕಡೆಯಲ್ಲಿ ಹಿಂದಿನ ದಿನದ ಪೇಪರು ಮಗುಚಿ ಹಾಕುತ್ತಿದ್ದ ಗಂಡನನ್ನು ಕರೆದಳು,

'ಅತ್ತೆ ಕರೀತಿದಾರೆ. ಸ್ವಲ್ಪ ಒಳಗೆ ಬರ್ತೀರಾ?'

ವೆಂಕಟರಾಮನ ಕಿವಿಗೂ ತಲುಪಿತು ಸುದ್ದಿ. 'ಎಲ್ಲಿ? ಎಲ್ಲಿ? ಎಲ್ಲಿ? ಕಮಲಾ ಎಲ್ಲಿ?'

ಬಾವಿಗೋ, ಕೆರೆಗೋ ಹಾರಿಕೊಂಡಿರಬಹುದಾ ಎನ್ನುವುದು ಮೊದಲ ಅನುಮಾನ. ಜೀವ ತೆಗೆದು ಕೊಳ್ಳುವಷ್ಟು ಅಳ್ಳೆದೆಯವಳಾಗಿದ್ದರೆ ಯಾವತ್ತೋ ತೆಗೆದುಕೊಳ್ಳಬೇಕಾಗಿತ್ತು. ಗಂಡ ಸತ್ತು ಇಷ್ಟು ವರ್ಷ ಆಗಿ, ಆ ಜೀವನಕ್ಕೆ ಅವಳು ಒಗ್ಗಿಕೊಂಡು, ಈಗ್ಯಾಕೆ ಜೀವ ತೆಗೆದುಕೊಳ್ಳುವ ಯೋಚನೆ ಮಾಡುತ್ತಾಳೆ?

'ಯಾರಿಗ್ಗೊತ್ತು, ಮನೇಲಿ ದಿನಾ ನಡೆಯೋ ನಾಟಕ ನೋಡಿ ಅವಳಿಗೆ ಏನನ್ನಿಸ್ತಿತ್ತೋ ಯಾರನ್ನ ಕೇಳ್ಬೇಕು? ಅದಕ್ಕೇ ಹೇಳೋದು, ಎಲ್ಲಾ ಒಂದು ಲಿಮಿಟ್ನಲ್ಲಿರ್ಬೇಕು...' ಅಂತಹ ಸಂದರ್ಭದಲ್ಲೂ ಶಿವರಾಮ ಅನಿಸಿದ್ದನ್ನು ಆಡದೆ ಬಿಡಲಿಲ್ಲ.

'ಹುಚ್ಚಾ ನಿಂಗೆ, ಸ್ವಲ್ಪ ಬಾಯ್ಮುಚ್ಕೊಂಡಿರು...' ವೆಂಕಮ್ಮ ಮಗನಿಗೆ ಗದರಿದರು. ವೆಂಕಟರಾಮು, ಕನಕ ಮುಖ ಮುಖ ನೋಡಿಕೊಂಡರೂ ವಾಗ್ವಾದಕ್ಕೆ ಅದು ಸಮಯವಲ್ಲ ಎಂದು ಇಬ್ಬರಿಗೂ ಗೊತ್ತು. 'ಯಾರಾದರೂ ಹಾರಿಸಿ ಕೊಂಡು ಹೋದರಾ?' ಎನ್ನುವವರೆಗೂ ಶಿವರಾಮ ಯೋಚನೆ ಮಾಡಿದ. ಬಾಯ್ಬಿಟ್ಟು ಹೇಳಲಿಲ್ಲ, ಅಷ್ಟೇ. ಮನೆ ಮರ್ಯಾದೆಯ ಪ್ರಶ್ನೆ, 'ಎಲ್ಲೋ ಹೋಗಿದ್ದಾಳೆ. ಬರುತ್ತಾಳೆ' ಎನ್ನುವ ಕುಟುಕು ಆಸೆ ಹೊತ್ತೇರುತ್ತಾ ಬಂದಂತೆ ಕಮರಿಹೋಯ್ತು. ಆಳುಗಳ ಬಿಡಾರದ ಹತ್ತಿರ ಹೋಗಿ ಸೂಕ್ಷ್ಮವಾಗಿ ಪತ್ತೆ ತೆಗೆದಿದ್ದ ಶಿವರಾಮ. ಎಲ್ಲರೂ ಇದ್ದಾರೆ. ಮುಖ್ಯವಾಗಿ ಸೇರೇಗಾರರು. ಸಸಿನೆಟ್ಟಿಯ ಗುತ್ತಿಗೆ ವಹಿಸಿಕೊಂಡು ಮಾಡುತ್ತಿದ್ದ ಅವರನ್ನು ಬಿಡಾರದ ಹತ್ತಿರ ನೋಡಿ ಬಂದ ಮೇಲೆ ಶಿವರಾಮನಿಗೆ ಸ್ವಲ್ಪ ಸಮಾಧಾನ. ಯಾರೂ ಹಾರಿಸಿಕೊಂಡು ಹೋಗಿಲ್ಲ. ಯಾರ ಹಿಂದೆಯೂ ಅಕ್ಕ ಓಡಿಹೋಗಿಲ್ಲ. ಮನೆ ಹೊಕ್ಕು ಹೊರಡುತ್ತಿದ್ದ ಹೊರಗಿನವರು ಅಂದರೆ ಅಡಿಕೆಕೊಯ್ಲಿನ ಹೊತ್ತಿಗೆ ಮನೆಗೆ ಬರುತ್ತಿದ್ದ ಸಂಭಾವನೆ ಭಟ್ಟರು. ಎಲ್ಲರೂ ಅಲ್ಲದಿದ್ದರೂ ಕೆಲವರಾದರೂ ಶಿವರಾಮನ ಅಪ್ಪ ಇದ್ದಾಗಿನ ಪರಿಚಯದ ಮೇಲೆ ಆ ರಾತ್ರಿ ಅಲ್ಲೇ ಠಿಕಾಣಿ ಹಾಕುತ್ತಿದ್ದರು. ಮರುದಿನ ಬೆಳಿಗ್ಗೆ ಸ್ನಾನ, ಜಪ, ಕಾಫಿ ತಿಂಡಿ ಮುಗಿಸಿ, ಕೊಟ್ಟ ಸಂಭಾವನೆ ಅಡಿಕೆಯನ್ನು ಚೀಲಕ್ಕೆ ಹಾಕಿಕೊಂಡು ಜಾಗ ಖಾಲಿ ಮಾಡುತ್ತಿದ್ದರು. ಜ್ಯೋತಿಷ್ಯ ಗೀತಿಷ್ಯ ಗೊತ್ತಿದ್ದವರ ಹತ್ತಿರ ಶಿವರಾಮ ಮನೆಮಂದಿಯ ಜಾತಕ ತೋರಿಸಿ ಗ್ರಾಚಾರ, ಸಂಧಿಕಾಲ ಮುಂತಾದ್ದರ ಮಾಹಿತಿ ಒಟ್ಟು ಮಾಡುತ್ತಿದ್ದ. ಅಗತ್ಯವಾದ ಪರಿಹಾರ ಕ್ರಮ ಮಾಡಿಸುತ್ತಿದ್ದ. ಅಡಿಕೆಕೊಯ್ಲು ಕಳೆದು ತಿಂಗಳುಗಟ್ಟಲೆ ಕಳೆದಿದೆ. ಅವಲಕ್ಕಿ ಭತ್ತದ ಬ್ರಾಹ್ಮಣ ಮಳೆಗಾಲದ ಹೊತ್ತಿಗೆ ಬರುವವರಲ್ಲ. ಕೆರೆ, ಬಾವಿ ನೋಡಿಕೊಂಡಿದ್ದೇ ಹೌದು ಅನಿಸಿದಾಗ ಎದೆ ನಗಾರಿಯಾಯ್ತು. ವೆಂಕಮ್ಮ ಮೂಲೆ ಹಿಡಿದು ಕೂತು ಭೋರೆಂದು ಅಳುತ್ತಿದ್ದರು.

ಸೀತಾಲಕ್ಷ್ಮಿ ಮೆದುಳು ಮರಗಟ್ಟಿದವಳಂತೆ ಆಚೀಚೆ ಓಡಾಡಿಕೊಂಡಿದ್ದಳು. ಕನಕನಿಗೆ ಅತ್ತಿಗೆ ಅಷ್ಟು ಬಳಕೆಯಾದವಳಲ್ಲ. ಆ ಮಟ್ಟಿನ ವಿಶ್ವಾಸ ಇನ್ನೂ ಬೆಳೆದಿರಲಿಲ್ಲ. ಹೊತ್ತು ಮಾರುದ್ದ ಏರಿದರೂ, ಯಾರಿಗೂ ಹೊಟ್ಟೆಯ ಚಿಂತೆ ಬರದಿದ್ದರೂ ಕನಕನಿಗೆ ಹೊಟ್ಟೆಯೊಳಗೆ ಹೆಗ್ಗಣ ಓಡಾಡುತ್ತಿತ್ತು. ಅಡುಗೆ ಮನೆಯ ತಪಾಸಣೆ ತೆಗೆದು ನೆನೆದು ಬಿರಿಯುವಂತಿದ್ದ ಅವಲಕ್ಕಿಯನ್ನು ಒಂದು ದೊಡ್ಡ ಬಟ್ಟಲಿಗೆ ಹಾಕಿಕೊಂಡು, ಬೆಳಿಗ್ಗೆ ಕಡೆದಿದ್ದ ಮಜ್ಜಿಗೆ, ಬೆಲ್ಲ ಬೆರೆಸಿಕೊಂಡು, ಒಂದು ಮೂಲೆ ಹುಡುಕಿ ಹೊಟ್ಟೆಪೂಜೆ ನೆರವೇರಿಸಿಕೊಂಡು ತೃಪ್ತಳಾದಳು ಕನಕ. 'ಏನಾರೂ ತಿಂತೀರೇನ್ರೀ?' ಎಂದು ಬಾಯ್ಬಿಟ್ಟು ಕೇಳದೆ ಸೈಗೆಯಿಂದ ಗಂಡನನ್ನು ವಿಚಾರಿಸಿಕೊಂಡಳು.

ಅಪರೂಪಕ್ಕೆ ವೆಂಕಟರಾಮು ಹೆಂಡತಿಯ ಕಡೆ ದುರುಗುಟ್ಟಿದ. ಒತ್ತಾಯ ಮಾಡಲು ಹೋಗಲಿಲ್ಲ ಕನಕ. ಇತ್ತ ವೆಂಕಮ್ಮ ಅತ್ತತ್ತು ಒಳಗಿನ ಆತಂಕಕ್ಕೆ, ಭೀತಿಗೆ ಒಂದು ಹೊರಹರಿವು ಕಲ್ಪಿಸಿಕೊಂಡ ಮೇಲೆ ಸೀತಾಲಕ್ಷ್ಮಿಯನ್ನು ವಿಚಾರಿಸಿಕೊಂಡರು.

(ಸಶೇಷ)